# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1604**
**ಸದಸ್ಯರ ಹೆಸರು** : ಶ್ರೀ ಸಿ.ಆರ್.ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 18.03.2021
**ಉತ್ತರಿಸುವ ಸಚಿವರು** : ಮುಖ್ಯಮಂತ್ರಿಗಳು

*****

| | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಸೇವೆಯಲ್ಲಿರುವ ಸರ್ಕಾರಿ ನೌಕರರು ಮಗುವನ್ನು ದತ್ತು ಪಡೆಯುವ ಸಂದರ್ಭದಲ್ಲಿ ಅನುಸರಿಸಬೇಕಾದ ಕಾನೂನು ನಿಯಮಗಳಾವುವು? (ಸಂಪೂರ್ಣ ವಿವರ ನೀಡುವುದು) | ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015, ಬಾಲನ್ಯಾಯ ಮಾದರಿ ನಿಯಮಗಳು-2016 ಮತ್ತು ದತ್ತು ಅಧಿಸೂಚನೆ-2017 ರನ್ವಯ ಮಗುವನ್ನು ದತ್ತು ಪಡೆಯಲು ಅವಕಾಶವಿರುತ್ತದೆ. **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ಸರ್ಕಾರಿ ನೌಕರರಿಗೆ ಯಾವುದೇ ಪ್ರತ್ಯೇಕವಾದ ಕಾನೂನಿನ ಅವಕಾಶ ಇರುವುದಿಲ್ಲ. |
| ಆ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ (KPTCL) ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ನೌಕರರುಗಳಲ್ಲಿ ಕಳೆದ ಮೂರು ವರ್ಷಗಳಿಂದ ಇತ್ತೀಚೆಗೆ ಮಗುವನ್ನು ದತ್ತು ಪಡೆದವರ ವಿವರ ನೀಡುವುದು ಹಾಗೂ ದತ್ತು ಪ್ರಕ್ರಿಯೆಗೆ ನೀಡಿರುವ ದಾಖಲೆಗಳ ವಿವರ ನೀಡುವುದು. | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮಗುವನ್ನು ದತ್ತು ಪಡೆಯುವ ಸಂದರ್ಭದಲ್ಲಿ ನಿಗಮಕ್ಕೆ ಮಾಹಿತಿ ಸಲ್ಲಿಸಬೇಕೆಂಬ ನಿಯಮ ಇರುವುದಿಲ್ಲ. ಆದಕಾರಣ ಕೋರಿರುವ ಮಾಹಿತಿಯು ಕ.ವಿ.ಪ್ರ.ನಿ.ನಿ.ಯಲ್ಲಿ ಲಭ್ಯವಿರುವುದಿಲ್ಲ. |

ಸಂಖ್ಯೆ: ಎನರ್ಜಿ 76 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

1604
4

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ C.R. ಮನೋಹರ (ಸ.ಸ.ಕ್ಷೆ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1604 ಕ್ಕೆ ಉತ್ತರ

3

ದತ್ತು ಕಾರ್ಯಕ್ರಮ:

ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವುದು ಪ್ರತಿಯೊಂದು ಮಗುವಿನ ಹಕ್ಕು. ಮಗುವಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತಾವರಣವು ಕಲ್ಪಿಸುತ್ತದೆ. ಈ ನಿಟ್ಟಿನಲ್ಲಿ ದತ್ತು ಪ್ರಕ್ರಿಯೆಯು ಅನಾಥ, ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳ ಪುನರ್ವಸತಿಗೆ ನೆರವಾಗುವ ಒಂದು ಸೂಕ್ತ ಕಾರ್ಯಕ್ರಮ. ಇಂತಹ ಮಕ್ಕಳಿಗೆ ದತ್ತು ಪೋಷಕರನ್ನು ಒದಗಿಸಿಕೊಡುವುದರ ಮೂಲಕ ಶಾಶ್ವತ ಕುಟುಂಬದ ವ್ಯವಸ್ಥೆಯನ್ನು ಕಾನೂನುಬದ್ಧವಾಗಿ ಕಲ್ಪಿಸಲು ದತ್ತು ಕಾರ್ಯಕ್ರಮ ನೆರವಾಗುತ್ತಿದೆ.

ಬಾಲ ನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015, ಬಾಲ ನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016 ಮತ್ತು ದತ್ತು ಅಧಿಸೂಚನೆ 2017ರನ್ವಯ ಮಕ್ಕಳನ್ನು ದತ್ತು ಪಡೆಯಲು ಅವಕಾಶವಿದೆ.

ಮಾನದಂಡಗಳು ಈ ಮುಂದಿನಂತಿವೆ:

1. ದೈಹಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿ ಸದೃಢರಾಗಿರುವ ಜೀವಕ್ಕೆ ಅಪಾಯಕಾರಿಯಲ್ಲದ ವೈದ್ಯಕೀಯ ಸ್ಥಿತಿಯಲ್ಲಿರುವ ಹಾಗೂ ಆರ್ಥಿಕ ಸಾಮರ್ಥ್ಯವುಳ್ಳ ಸಂಭವನೀಯ ದತ್ತು ಪೋಷಕರು ಅರ್ಹರು.

2. ಯಾವುದೇ ಸಂಭವನೀಯ ದತ್ತು ಪೋಷಕರು, ಅವರ ವೈವಾಹಿಕ ಸ್ಥಿತಿಯನ್ನು ಲೆಕ್ಕಿಸದೇ ಮತ್ತು ಅವರ ಜೈವಿಕ ಮಗ ಅಥವಾ ಮಗಳು ಇದ್ದಾರೋ ಇಲ್ಲವೋ ಎಂಬುದನ್ನು ಪರಿಗಣಿಸದೇ, ಈ ಕೆಳಕಂಡ ಅಂಶಗಳ ಆಧಾರದಲ್ಲಿ ಮಗುವನ್ನು ದತ್ತು ಪಡೆಯಬಹುದು:

- ವಿವಾಹಿತರಾಗಿದ್ದಲ್ಲಿ, ದತ್ತು ಪಡೆಯುವ ಬಗ್ಗೆ ದಂಪತಿಗಳಿಬ್ಬರ ಒಪ್ಪಿಗೆಯು ಕಡ್ಡಾಯವಾಗಿ ಅವಶ್ಯವಾಗಿರುತ್ತದೆ.
- ಒಬ್ಬಂಟಿಗ ಮಹಿಳೆಯು ಯಾವುದೇ ಲಿಂಗದ ಮಗುವನ್ನು ಪಡೆಯಲು ಅರ್ಹರಿರುತ್ತಾರೆ.
- ಒಬ್ಬಂಟಿಗ ಪುರುಷರು ಹೆಣ್ಣು ಮಗುವನ್ನು ದತ್ತು ಪಡೆಯಲು ಅರ್ಹರಿರುವುದಿಲ್ಲ.

3. ಕನಿಷ್ಠ 2 ವರ್ಷಗಳ ಸ್ಥಿರ ವೈವಾಹಿಕ ಸಂಬಂಧವನ್ನು ಹೊಂದಿರದ ದಂಪತಿಗಳಿಗೆ, ಯಾವುದೇ ಮಗುವನ್ನು ದತ್ತು ನೀಡಲಾಗುವುದಿಲ್ಲ.

4. ಸಂಭವನೀಯ ದತ್ತು ಪೋಷಕರಿಗೆ ವಯೋಮಿತಿಯ ನಿರ್ಬಂಧವಿದೆ. [ದತ್ತು ಅಧಿಸೂಚನೆ-2017ರ ರೆಗ್ಯೂಲೇಷನ್ 5 (4) & (5)]

| ಮಗುವಿನ ವಯಸ್ಸು | ಸಂಭವನೀಯ ದತ್ತು ಪೋಷಕರ ಒಟ್ಟಾರೆ ಗರಿಷ್ಠ ವಯಸ್ಸು (ದಂಪತಿಗಳು) | ಸಂಭವನೀಯ ದತ್ತು ಏಕ ಪೋಷಕರ ಗರಿಷ್ಠ ವಯಸ್ಸು |
|---|---|---|
| 0-4 ವಯೋಮಾನ | 90 ವರ್ಷಗಳು | 45 ವರ್ಷಗಳು |
| 4-8 ವಯೋಮಾನ | 100 ವರ್ಷಗಳು | 50 ವರ್ಷಗಳು |
| 8-18 ವಯೋಮಾನ | 110 ವರ್ಷಗಳು | 55 ವರ್ಷಗಳು |

ಸಂಭವನೀಯ ದತ್ತು ಪೋಷಕರಲ್ಲಿನ ಯಾರಾದರೊಬ್ಬರ ವಯಸ್ಸು ದತ್ತು ಪಡೆಯುವ ಮಗುವಿನ ವಯಸ್ಸಿಗಿಂತ ಕನಿಷ್ಠ 25 ವರ್ಷಗಳ ಅಂತರವನ್ನು ಹೊಂದಿರಬೇಕು.